सत्यमेव जयते

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ತಂದೆ ತಾಯಿಯರ ಮತ್ತು ಹಿರಿಯ ನಾಗರಿಕರ ಪಾಲನೆ-ಪೋಷಣೆ ಮತ್ತು ಕಲ್ಯಾಣ ಅಧಿನಿಯಮ, 2007

**(2007ರ ಅಧಿನಿಯಮ ಸಂಖ್ಯೆ 56)**

**[25ನೇ ಏಪ್ರಿಲ್, 2011 ರಂದು ಜಾರಿಯಲ್ಲಿದ್ದಂತೆ]**

# THE MAINTENANCE AND WELFARE OF PARENTS AND SENIOR CITIZENS ACT, 2007

**(Act No. 56 of 2007)**

[As on 25th April, 2011]

# ಮುನ್ನುಡಿ

25.04.2011 ರಂದು ಜಾರಿಯಲ್ಲಿದ್ದಂತೆ, ದಿ ಮೇನ್‌ಟನನ್ಸ್ ಅಂಡ್ ವೆಲ್‌ಫೇರ್ ಆಫ್ ಪೇರಂಟ್ಸ್ ಅಂಡ್ ಸೀನಿಯರ್ ಸಿಟಿಜನ್ಸ್ ಆ್ಯಕ್ಟ್, 2007 (2007ರ 56) – ಇದರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 25.04.2011ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 45ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 127 ರಿಂದ 137ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

**ವಿ.ಕೆ. ಭಸೀನ್**
ಕಾರ್ಯದರ್ಶಿ
ಭಾರತ ಸರ್ಕಾರ.

ನವದೆಹಲಿ
ದಿನಾಂಕ:

## PREFACE

This edition of the Maintenance and Welfare of Parents and Senior Citizens Act, 2007 (56 of 2007) as on the 25.04.2011 contains the authoritative text of that Act in Kannada which was published in the Gazette of India Extraordinary, Part IX, Section 1, No.1, Vol. 45, dated 25.04.2011 on pages 127 to 137.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

New Delhi
Date :

**V.K. BHASIN**
Secretary,
Government of India.

**ತಂದೆ ತಾಯಿಯರ ಮತ್ತು ಹಿರಿಯ ನಾಗರಿಕರ ಪಾಲನೆ-ಪೋಷಣೆ ಮತ್ತು ಕಲ್ಯಾಣ ಅಧಿನಿಯಮ, 2007**

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:** **ಪುಟಗಳು**

**ಅಧ್ಯಾಯ –I**

**ಪ್ರಾರಂಭಿಕ**


1. ಚಿಕ್ಕ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ 1
2. ಪರಿಭಾಷೆಗಳು 1
3. ಈ ಅಧಿನಿಯಮದ ಅಧ್ಯಾರೋಹಿ ಪರಿಣಾಮ 2


**ಅಧ್ಯಾಯ –II**

**ತಂದೆ ತಾಯಿಯರ ಮತ್ತು ಹಿರಿಯ ನಾಗರಿಕರ ಪಾಲನೆ-ಪೋಷಣೆ**


4. ತಂದೆ ತಾಯಿಯರ ಮತ್ತು ಹಿರಿಯ ನಾಗರಿಕರ ಪಾಲನೆ–ಪೋಷಣೆ 3
5. ಪಾಲನೆ– ಪೋಷಣೆಗಾಗಿ ಅರ್ಜಿ 4
6. ಅಧಿಕಾರ ವ್ಯಾಪ್ತಿ ಮತ್ತು ಪ್ರಕ್ರಿಯೆ 5
7. ಪಾಲನೆ–ಪೋಷಣೆ ನ್ಯಾಯಾಧಿಕರಣದ ರಚನೆ 7
8. ವಿಚಾರಣೆಯ ಸಂದರ್ಭದಲ್ಲಿ ಕ್ಷಿಪ್ರ ಪ್ರಕ್ರಿಯೆ 7
9. ಪಾಲನೆ–ಪೋಷಣೆಗೆ ಆದೇಶ 8
10. ಭತ್ಯೆಯ ಮೊಬಲಗಿನಲ್ಲಿ ಬದಲಾವಣೆ 8
11. ಪಾಲನೆ–ಪೋಷಣೆ ಆದೇಶದ ಜಾರಿ 8
12. ಕೆಲವು ಪ್ರಕರಣಗಳಲ್ಲಿ ಪಾಲನೆ– ಪೋಷಣೆಗೆ ಸಂಬಂಧಿಸಿದಂತೆ ಆಯ್ಕೆಯ ಅವಕಾಶ 9
13. ಪಾಲನೆ–ಪೋಷಣೆಯ ಹಣವನ್ನು ಠೇವಣಿಯಿಡುವುದು 9
14. ಯಾವುದೇ ಕ್ಲೇಮನ್ನು ಅಂಗೀಕರಿಸಿದಲ್ಲಿ ಬಡ್ಡಿಗೆ ಆದೇಶಿಸುವುದು 9
15. ಅಪೀಲು ನ್ಯಾಯಾಧಿಕರಣದ ಸ್ಥಾಪನೆ 10
16. ಅಪೀಲುಗಳು 10
17. ಕಾನೂನುಸಮ್ಮತ ಪ್ರಾತಿನಿಧ್ಯಕ್ಕೆ ಹಕ್ಕು 11
18. ಪಾಲನೆ–ಪೋಷಣೆ ಅಧಿಕಾರಿ 11


**ಅಧ್ಯಾಯ – III**

**ವೃದ್ಧಾಶ್ರಮಗಳ ಸ್ಥಾಪನೆ**


19. ವೃದ್ಧಾಶ್ರಮಗಳ ಸ್ಥಾಪನೆ 11


(2)

## ಅಧ್ಯಾಯ – IV

## ಹಿರಿಯ ನಾಗರಿಕರ ವೈದ್ಯೋಪಚಾರಗಳಿಗಾಗಿ ಏರ್ಪಾಟುಗಳು

20. ಹಿರಿಯ ನಾಗರಿಕರಿಗೆ ವೈದ್ಯಕೀಯ ನೆರವು 12

## ಅಧ್ಯಾಯ – V

## ಹಿರಿಯ ನಾಗರಿಕರ ಜೀವ ಮತ್ತು ಆಸ್ತಿಗಳ ರಕ್ಷಣೆ

21. ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಪ್ರಚಾರ, ಜಾಗೃತಿ, ಮುಂತಾದವುಗಳಿಗೆ ಕ್ರಮಗಳು 13

22. ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿರ್ದಿಷ್ಟಪಡಿಸಬಹುದಾದ ಪ್ರಾಧಿಕಾರಿಗಳು 13

23. ಕೆಲವು ಸಂದರ್ಭಗಳಲ್ಲಿ ಆಸ್ತಿ ವರ್ಗಾವಣೆಯು ಶೂನ್ಯವಾಗುವುದು 14

## ಅಧ್ಯಾಯ – VI

## ಅಪರಾಧಗಳು ಮತ್ತು ಅಧಿವಿಚಾರಣಾ ಪ್ರಕ್ರಿಯೆ

24. ಹಿರಿಯ ನಾಗರಿಕನನ್ನು ಮನೆಯಿಂದ ಹೊರಗೆ ಹಾಕುವುದು ಮತ್ತು ಪರಿತ್ಯಜಿಸುವುದು 14

25. ಅಪರಾಧಗಳ ಸಂಜ್ಞಾನ 15

## ಅಧ್ಯಾಯ – VII

## ಸಂಕೀರ್ಣ

26. ಅಧಿಕಾರಿಗಳು ಲೋಕ ನೌಕರರಾಗಿರುವುದು 15

27. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ 15

28. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ 15

29. ತೊಂದರೆಗಳನ್ನು ನಿವಾರಿಸಲು ಅಧಿಕಾರ 15

30. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ 16

31. ಪುನರವಲೋಕನ ಮಾಡಲು ಕೇಂದ್ರ ಸರ್ಕಾರದ ಅಧಿಕಾರ 16

32. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ 16

## ತಂದೆ ತಾಯಿಯರ ಮತ್ತು ಹಿರಿಯ ನಾಗರಿಕರ ಪಾಲನೆ-ಪೋಷಣೆ ಮತ್ತು ಕಲ್ಯಾಣ ಅಧಿನಿಯಮ, 2007

**(2007ರ ಅಧಿನಿಯಮ ಸಂಖ್ಯೆ 56)**

**[ಡಿಸೆಂಬರ್ 29, 2007]**

ತಂದೆ ತಾಯಿಯರಿಗೆ ಮತ್ತು ಹಿರಿಯ ನಾಗರಿಕರಿಗೆ ಸಂವಿಧಾನದ ಮೇರೆಗೆ ಖಾತರಿ ನೀಡಿರುವ ಮತ್ತು ಅಂಗೀಕರಿಸಿರುವ ಪಾಲನೆ-ಪೋಷಣೆಗಾಗಿ ಮತ್ತು ಕಲ್ಯಾಣಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಹೆಚ್ಚು ಪರಿಣಾಮಕಾರಿ ಉಪಬಂಧಗಳನ್ನು ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಐವತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

### ಅಧ್ಯಾಯ -I
### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ತಂದೆ ತಾಯಿಯರ ಮತ್ತು ಹಿರಿಯ ನಾಗರಿಕರ ಪಾಲನೆ-ಪೋಷಣೆ ಮತ್ತು ಕಲ್ಯಾಣ ಅಧಿನಿಯಮ, 2007 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ ಮತ್ತು ಭಾರತದ ಹೊರಗಿರುವ ಭಾರತದ ನಾಗರಿಕರಿಗೂ ಸಹ ಅನ್ವಯವಾಗುತ್ತದೆ.

(3) ಇದು, ಒಂದು ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಆ ರಾಜ್ಯದಲ್ಲಿ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಕ್ಕಳು" ಎಂಬುದು ಮಗನನ್ನು, ಮಗಳನ್ನು, ಮೊಮ್ಮಗನನ್ನು ಮತ್ತು ಮೊಮ್ಮಗಳನ್ನು ಒಳಗೊಳ್ಳುತ್ತದೆ. ಆದರೆ ಇದು ಅಪ್ರಾಪ್ತ ವಯಸ್ಕರನ್ನು ಒಳಗೊಳ್ಳುವುದಿಲ್ಲ;

(ಬಿ) "ಪಾಲನೆ-ಪೋಷಣೆ" ಎಂಬುದು ಆಹಾರ, ಬಟ್ಟೆ-ಬರೆ, ವಸತಿ ಮತ್ತು ವೈದ್ಯೋಪಚಾರ ಹಾಗೂ ಚಿಕಿತ್ಸೆ ಒದಗಿಸುವುದನ್ನು ಒಳಗೊಳ್ಳುತ್ತದೆ;

(ಸಿ) "ಅಪ್ರಾಪ್ತ ವಯಸ್ಕ" ಎಂದರೆ, ಪ್ರಾಪ್ತ ವಯಸ್ಕತೆ ಅಧಿನಿಯಮ, 1875 (1875ರ 9)ರ ಉಪಬಂಧಗಳ ಮೇರೆಗೆ ಯಾವ ವ್ಯಕ್ತಿಯನ್ನು ಪ್ರಾಪ್ತ ವಯಸ್ಕನಾಗಿಲ್ಲವೆಂದು ಭಾವಿಸಲಾಗಿದೆಯೋ ಆ ವ್ಯಕ್ತಿ;

(ಡಿ) "ತಂದೆ ತಾಯಿ" ಎಂದರೆ ತಂದೆ ಅಥವಾ ತಾಯಿಯು ಹಿರಿಯ ನಾಗರಿಕರಾಗಿರಲಿ ಅಥವಾ ಆಗಿಲ್ಲದಿರಲಿ, ಸಂದರ್ಭಾನುಸಾರ ಹೆತ್ತ ತಂದೆ–ತಾಯಿ, ದತ್ತಕ ತಂದೆ–ತಾಯಿ ಅಥವಾ ಮಲತಂದೆ ಅಥವಾ ಮಲತಾಯಿ;

(ಇ) "ನಿಯಮಿಸಿದ" ಎಂದರೆ ರಾಜ್ಯ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಫ್) "ಸ್ವತ್ತು" ಎಂದರೆ ಚರ ಅಥವಾ ಸ್ಥಿರ, ಪಿತ್ರಾರ್ಜಿತ ಅಥವಾ ಸ್ವಯಾರ್ಜಿತ, ಮೂರ್ತ ಅಥವಾ ಅಮೂರ್ತವಾದ ಯಾವುದೇ ಬಗೆಯ ಸ್ವತ್ತು ಮತ್ತು ಅದು ಅಂಥ ಸ್ವತ್ತಿನಲ್ಲಿನ ಹಕ್ಕುಗಳನ್ನು ಅಥವಾ ಹಿತಾಸಕ್ತಿಗಳನ್ನು ಒಳಗೊಳ್ಳುತ್ತದೆ.

(ಜಿ) "ಸಂಬಂಧಿ" ಎಂದರೆ ಮಕ್ಕಳಿಲ್ಲದ ಹಿರಿಯ ನಾಗರಿಕನ ಮತ್ತು ಆತನ ಸ್ವತ್ತಿನ ಸ್ವಾಧೀನ ಹೊಂದಿರುವ ಅಥವಾ ಆತನ ಮರಣಾ ನಂತರ ಅದಕ್ಕೆ ವಾರಸುದಾರನಾಗುವ ಅಪ್ರಾಪ್ತ ವಯಸ್ಕನಲ್ಲದ ಯಾರೇ ಕಾನೂನು ಸಮ್ಮತ ವಾರಸುದಾರ;

(ಎಚ್) "ಹಿರಿಯ ನಾಗರಿಕ" ಎಂದರೆ ಅರವತ್ತು ಅಥವಾ ಅದಕ್ಕೂ ಹೆಚ್ಚು ವಯಸ್ಸು ಆಗಿರುವಂಥ ಭಾರತದ ನಾಗರಿಕನಾಗಿರುವ ಯಾರೇ ವ್ಯಕ್ತಿ;

(ಐ) ಒಕ್ಕೂಟ ರಾಜ್ಯಕ್ಷೇತ್ರದ ಸಂಬಂಧದಲ್ಲಿ, "ರಾಜ್ಯ ಸರ್ಕಾರ" ಎಂದರೆ, ಸಂವಿಧಾನದ 239ನೇ ಅನುಚ್ಛೇದದ ಮೇರೆಗೆ ನೇಮಕಗೊಂಡ ಅದರ ಆಡಳಿತಗಾರ;

(ಜೆ) "ನ್ಯಾಯಾಧಿಕರಣ" ಎಂದರೆ 7ನೇ ಪ್ರಕರಣದ ಮೇರೆಗೆ ರಚಿತವಾದ ಪಾಲನೆ–ಪೋಷಣೆ ನ್ಯಾಯಾಧಿಕರಣ;

(ಕೆ) "ಕಲ್ಯಾಣ" ಎಂದರೆ ಹಿರಿಯ ನಾಗರಿಕರಿಗೆ ಅವಶ್ಯವಿರುವ ಆಹಾರ, ಆರೋಗ್ಯಪಾಲನೆ, ಮನರಂಜನೆ ಕೇಂದ್ರಗಳು ಮತ್ತು ಇತರ ಸೌಕರ್ಯಗಳನ್ನು ಒದಗಿಸುವುದು;

**3. ಈ ಅಧಿನಿಯಮದ ಅಧ್ಯಾರೋಹಿ ಪರಿಣಾಮ.–** ಈ ಅಧಿನಿಯಮದ ಉಪಬಂಧಗಳು, ಈ ಅಧಿನಿಯಮವನ್ನು ಹೊರತುಪಡಿಸಿ ಇತರ ಯಾವುದೇ ಅಧಿನಿಯಮದಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ, ಯಾವುದೇ ಅಧಿನಿಯಮದ ಬಲದಿಂದ ಜಾರಿಗೆ ಬರುವ

ಯಾವುದೇ ಲಿಖಿತದಲ್ಲಿ ಅದಕ್ಕೆ ಅಸಂಗತವಾದುದು ಏನೇ ಒಳಗೊಂಡಿದ್ದರೂ ಪರಿಣಾಮಕಾರಿಯಾಗತಕ್ಕದ್ದು.

## ಅಧ್ಯಾಯ –II
## ತಂದೆ ತಾಯಿಯರ ಮತ್ತು ಹಿರಿಯ ನಾಗರಿಕರ ಪಾಲನೆ–ಪೋಷಣೆ

**4. ತಂದೆ ತಾಯಿಯರ ಮತ್ತು ಹಿರಿಯ ನಾಗರಿಕರ ಪಾಲನೆ–ಪೋಷಣೆ.–** (1) ತನ್ನ ಸ್ವಂತ ಗಳಿಕೆ ಯಿಂದ ಅಥವಾ ತನ್ನ ಒಡೆತನದ ಆಸ್ತಿಯಿಂದ ತನ್ನ ಪಾಲನೆ–ಪೋಷಣೆ ಮಾಡಿಕೊಳ್ಳಲು ಅಸಮರ್ಥನಾಗಿರುವ ತಂದೆ ತಾಯಿಯರೂ ಸೇರಿದಂತೆ ಯಾರೇ ಹಿರಿಯ ನಾಗರಿಕನು,–

(i) ತಂದೆ–ತಾಯಿ ಅಥವಾ ಅಜ್ಜ–ಅಜ್ಜಿಯ ಸಂದರ್ಭದಲ್ಲಿ, ಅಪ್ರಾಪ್ತ ವಯಸ್ಕನಲ್ಲದ ತನ್ನ ಮಕ್ಕಳಲ್ಲಿ ಒಬ್ಬನ ಅಥವಾ ಹೆಚ್ಚು ಮಂದಿಯ ವಿರುದ್ಧ;

(ii) ಮಕ್ಕಳಿಲ್ಲದ ಹಿರಿಯ ನಾಗರಿಕನ ಸಂದರ್ಭದಲ್ಲಿ, 2ನೇ ಪ್ರಕರಣದ (ಜಿ) ಖಂಡದಲ್ಲಿ ಉಲ್ಲೇಖಿಸಿದಂಥ ಆತನ ಸಂಬಂಧಿಯ ವಿರುದ್ಧ

– 5ನೇ ಪ್ರಕರಣದ ಮೇರೆಗೆ ಅರ್ಜಿ ಸಲ್ಲಿಸಲು ಹಕ್ಕುಳ್ಳವನಾಗಿರತಕ್ಕದ್ದು.

(2) ಹಿರಿಯ ನಾಗರಿಕನ ಸಾಮಾನ್ಯ ಜೀವನ ನಿರ್ವಹಣೆಗೆ ಏನೇನು ಅಗತ್ಯವೋ ಅದನ್ನು ಪೂರೈಸುವಷ್ಟರಮಟ್ಟಿಗೆ ಹಿರಿಯ ನಾಗರಿಕನನ್ನು ಪಾಲನೆ–ಪೋಷಣೆ ಮಾಡುವುದು ಮಕ್ಕಳ ಅಥವಾ ಸಂದರ್ಭಾನುಸಾರ ಸಂಬಂಧಿಯ ಬಾಧ್ಯತೆಯಾಗಿರತಕ್ಕದ್ದು.

(3) ತಮ್ಮ ತಂದೆ ಅಥವಾ ತಾಯಿ ಅಥವಾ ಸಂದರ್ಭಾನುಸಾರ ಅವರಿಬ್ಬರೂ ಸಾಮಾನ್ಯ ಜೀವನ ನಡೆಸುವುದಕ್ಕೆ ಅಗತ್ಯವಾದುದನ್ನು ಪೂರೈಸುವಷ್ಟರಮಟ್ಟಿಗೆ ಅವರ ಪಾಲನೆ–ಪೋಷಣೆ ಮಾಡುವುದು ಮಕ್ಕಳ ಬಾಧ್ಯತೆಯಾಗಿರತಕ್ಕದ್ದು.

(4) ಹಿರಿಯ ನಾಗರಿಕನ ಸಂಬಂಧಿಯಾಗಿರುವ ಮತ್ತು ಸ್ಥಿತಿವಂತನಾಗಿರುವ ಯಾರೇ ವ್ಯಕ್ತಿಯು ಅಂಥ ಹಿರಿಯ ನಾಗರಿಕನ ಪಾಲನೆ–ಪೋಷಣೆ ಮಾಡತಕ್ಕದ್ದು; ಪರಂತು ಅವನು ಅಂಥ ಹಿರಿಯ ನಾಗರಿಕನ ಸ್ವತ್ತಿನ ಸ್ವಾಧೀನತೆ ಹೊಂದಿರಬೇಕು ಅಥವಾ ಅವನು ಅಂಥ ಹಿರಿಯ ನಾಗರಿಕನ ಸ್ವತ್ತಿನ ವಾರಸುದಾರನಾಗಿರಬೇಕು:

ಪರಂತು, ಒಬ್ಬನಿಗಿಂತ ಹೆಚ್ಚು ಮಂದಿ ಸಂಬಂಧಿಕರು ಹಿರಿಯ ನಾಗರಿಕನ ಸ್ವತ್ತನ್ನು ವಾರಸುದಾರರಾಗಿ ಪಡೆಯಲು ಹಕ್ಕುಳ್ಳವರಾಗಿರುವಲ್ಲಿ, ಅಂಥ ಸಂಬಂಧಿಕರು ಅವರು ಆಸ್ತಿಯಲ್ಲಿ ಎಷ್ಟು ಭಾಗವನ್ನು ವಾರಸುದಾರರಾಗಿ ಪಡೆಯಲಿರುವರೋ ಆ ಪ್ರಮಾಣಾನುಸಾರ ಆತನ ಪಾಲನೆ–ಪೋಷಣೆಗೆ ಹಣವನ್ನು ಸಂದಾಯ ಮಾಡತಕ್ಕದ್ದು.

5. **ಪಾಲನೆ– ಪೋಷಣೆಗಾಗಿ ಅರ್ಜಿ.–** (1) (ಎ) ಹಿರಿಯ ನಾಗರಿಕನು ಅಥವಾ ಸಂದರ್ಭಾನುಸಾರ, ತಂದೆ ಅಥವಾ ತಾಯಿಯು;

(ಬಿ) ಅವನು ಅಸಮರ್ಥನಾದರೆ ಅವನಿಂದ ಅಧಿಕೃತಗೊಂಡ ಯಾರೇ ಇತರ ವ್ಯಕ್ತಿಯು ಅಥವಾ ಸಂಸ್ಥೆಯು 4ನೇ ಪ್ರಕರಣದ ಅಡಿಯಲ್ಲಿ ಪಾಲನೆ ಪೋಷಣೆ ಕೋರಿ ಅರ್ಜಿ ಸಲ್ಲಿಸಬಹುದು; ಅಥವಾ

(ಸಿ) ನ್ಯಾಯಾಧಿಕರಣವು ಸ್ವಯಂಪ್ರೇರಣೆಯಿಂದ ತನ್ನ ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ಸಂಸ್ಥೆ" ಎಂದರೆ, ಸೊಸೈಟಿಗಳ ನೋಂದಣಿ ಅಧಿನಿಯಮ, 1860 ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ನೋಂದಾಯಿತವಾದ ಯಾವುದೇ ಸ್ವಯಂ ಸೇವಾ ಸಂಸ್ಥೆ.

(2) ನ್ಯಾಯಾಧಿಕರಣವು ಈ ಪ್ರಕರಣದ ಮೇರೆಗೆ ಪಾಲನೆ-ಪೋಷಣೆಗಾಗಿ ಮಾಸಿಕ ಭತ್ಯೆಗೆ ಸಂಬಂಧಪಟ್ಟ ವ್ಯವಹರಣೆಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ ತಂದೆ ತಾಯಿಯೂ ಸೇರಿದಂತೆ ಅಂಥ ಹಿರಿಯ ನಾಗರಿಕರಿಗೆ ಮಧ್ಯಂತರ ಪಾಲನೆ ಪೋಷಣೆಗಾಗಿ ಮಾಸಿಕ ಭತ್ಯೆ ನೀಡಲು ಮತ್ತು ನ್ಯಾಯಾಧಿಕರಣವು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂತೆ ತಂದೆ ತಾಯಿಯೂ ಸೇರಿದಂತೆ ಅಂಥ ಹಿರಿಯ ನಾಗರಿಕರಿಗೆ ಅದನ್ನು ಸಂದಾಯ ಮಾಡುವಂತೆ ಅಂಥ ಮಕ್ಕಳಿಗೆ ಅಥವಾ ಸಂಬಂಧಿಕರಿಗೆ ಆದೇಶಿಸಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಪಾಲನೆ-ಪೋಷಣೆ ಕುರಿತ ಅರ್ಜಿ ಸ್ವೀಕರಿಸಿದ ಮೇಲೆ, ಮಕ್ಕಳಿಗೆ ಅಥವಾ ಸಂಬಂಧಿಗೆ ನೋಟೀಸು ನೀಡಿದ ತರುವಾಯ ಮತ್ತು ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶ ನೀಡಿದ ತರುವಾಯ ಪಾಲನೆ-ಪೋಷಣೆಗೆ ಮೊಬಲಗನ್ನು ನಿರ್ಧರಿಸುವುದಕ್ಕಾಗಿ ವಿಚಾರಣೆ ನಡೆಸತಕ್ಕದ್ದು.

(4) ಪಾಲನೆ-ಪೋಷಣೆ ಮಾಸಿಕ ಭತ್ಯೆಗಾಗಿ ಮತ್ತು ವ್ಯವಹರಣೆ ವೆಚ್ಚಕ್ಕಾಗಿ (2)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯನ್ನು ಅಂಥ ವ್ಯಕ್ತಿಗೆ ಅರ್ಜಿಯ ಬಗ್ಗೆ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ತೊಂಬತ್ತು ದಿವಸಗಳೊಳಗಾಗಿ ವಿಲೆ ಮಾಡತಕ್ಕದ್ದು:

ಪರಂತು, ನ್ಯಾಯಾಧಿಕರಣವು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಅಸಾಧಾರಣ ಸಂದರ್ಭಗಳಲ್ಲಿ ಒಂದೇ ಒಂದು ಬಾರಿ ಮೂವತ್ತು ದಿವಸಗಳ ಗರಿಷ್ಠ ಅವಧಿಯವರೆಗೆ ಸದರಿ ಅವಧಿಯನ್ನು ವಿಸ್ತರಿಸಬಹುದು.

(5) (1)ನೇ ಉಪಪ್ರಕರಣದ ಮೇರೆಗೆ ಪಾಲನೆ-ಪೋಷಣೆಗಾಗಿ ಒಂದು ಅರ್ಜಿಯನ್ನು ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳ ವಿರುದ್ಧ ಸಲ್ಲಿಸಬಹುದು:

ಪರಂತು, ಅಂಥ ಮಕ್ಕಳು ಅಥವಾ ಸಂಬಂಧಿಯು, ಪಾಲನೆ- ಪೋಷಣೆ ಅರ್ಜಿಯಲ್ಲಿ ತಂದೆ ತಾಯಿಯರನ್ನು ಪಾಲನೆ-ಪೋಷಣೆ ಮಾಡಲು ಬದ್ಧನಾಗಿರುವ ಇತರ ವ್ಯಕ್ತಿಯನ್ನು ಪಕ್ಷಕಾರನನ್ನಾಗಿ ಸೇರಿಸಬಹುದು.

(6) ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳ ವಿರುದ್ಧ ಪಾಲನೆ- ಪೋಷಣೆ ಆದೇಶ ಮಾಡಿದ್ದು, ಅವರಲ್ಲಿ ಒಬ್ಬನು ಮರಣ ಹೊಂದಿರುವಲ್ಲಿ, ಅದು ಪಾಲನೆ-ಪೋಷಣೆಗೆ ಹಣ ಸಂದಾಯ ಮಾಡುವುದನ್ನು ಮುಂದುವರಿಸಿಕೊಂಡು ಹೋಗಬೇಕಾದ ಇತರರ ಹೊಣೆಗಾರಿಕೆಗೆ ಬಾಧಕವನ್ನುಂಟುಮಾಡುವುದಿಲ್ಲ.

(7) ಪಾಲನೆ-ಪೋಷಣೆಗಾಗಿ ಯಾವುದೇ ಅಂಥ ಭತ್ಯೆಯನ್ನು ಮತ್ತು ವ್ಯವಹರಣೆಗಳ ವೆಚ್ಚಗಳನ್ನು ಆದೇಶದ ದಿನಾಂಕದಿಂದ ಅಥವಾ ಸಂದರ್ಭಾನುಸಾರ, ಪಾಲನೆ ಪೋಷಣೆಗಾಗಿ ಅಥವಾ ವ್ಯವಹರಣೆಗಳ ವೆಚ್ಚಗಳಿಗಾಗಿ ಅರ್ಜಿ ಸಲ್ಲಿಸಿದ ದಿನಾಂಕದಿಂದ ಸಂದಾಯ ಮಾಡಬೇಕೆಂದು ಆದೇಶಿಸಿದರೆ ಹಾಗೆ ಸಂದಾಯ ಮಾಡತಕ್ಕದ್ದು.

(8) ಹಾಗೆ ಆದೇಶ ಪಡೆದ ಮಕ್ಕಳು, ಅಥವಾ ಸಂಬಂಧಿಯು, ಸಾಕಷ್ಟು ಕಾರಣವಿಲ್ಲದೆ ಆದೇಶವನ್ನು ಪಾಲಿಸಲು ವಿಫಲರಾದರೆ ಯಾವುದೇ ಅಂಥ ನ್ಯಾಯಾಧಿಕರಣವು ಆದೇಶದ ಪ್ರತಿಯೊಂದು ಉಲ್ಲಂಘನೆಗಾಗಿ ಜುಲ್ಮಾನೆಗಳನ್ನು ವಸೂಲಿ ಮಾಡುವುದಕ್ಕಾಗಿ ಉಪಬಂಧಿಸಲಾದ ರೀತಿಯಲ್ಲಿ ಬಾಕಿಯಿರುವ ಮೊಬಲಗನ್ನು ವಸೂಲಿ ಮಾಡಲು ವಾರಂಟ್ ಹೊರಡಿಸಬಹುದು ಮತ್ತು ವಾರಂಟ್ ಜಾರಿ ಮಾಡಿದ ತರುವಾಯ, ಸಂದಾಯ ಮಾಡದೆ ಉಳಿದಿರುವ, ಪಾಲನೆ- ಪೋಷಣೆಯ ಪ್ರತಿ ತಿಂಗಳ ಪೂರ್ಣ ಭತ್ಯಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ ಮತ್ತು ಸಂದರ್ಭಾನುಸಾರ ವ್ಯವಹರಣೆಯ ವೆಚ್ಚಗಳಿಗಾಗಿ ಒಂದು ತಿಂಗಳಿಗೆ ವಿಸ್ತರಿಸಬಹುದಾದ ಅವಧಿಗೆ ಅಥವಾ ಬೇಗನೆ ಸಂದಾಯವನ್ನು ಮಾಡುವವರೆಗೆ ಇವುಗಳಲ್ಲಿ ಯಾವುದು ಮುಂಚಿತವೋ ಆ ಅವಧಿಯವರೆಗೆ ಅಂಥ ವ್ಯಕ್ತಿಯನ್ನು ಕಾರಾವಾಸ ಶಿಕ್ಷೆಗೆ ಗುರಿಪಡಿಸಬಹುದು:

ಪರಂತು, ಬಾಕಿಯಿರುವ ಯಾವುದೇ ಮೊಬಲಗಿನ ವಸೂಲಿಗಾಗಿ, ಅದನ್ನು ಬಾಕಿಯಿರುವ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಅಂಥ ಮೊಬಲಗನ್ನು ವಸೂಲಿ ಮಾಡಲು ನ್ಯಾಯಾಧಿಕರಣಕ್ಕೆ ಅರ್ಜಿ ಸಲ್ಲಿಸಿದ್ದ ಹೊರತು ಈ ಪ್ರಕರಣದ ಮೇರೆಗೆ ಯಾವುದೇ ವಾರಂಟನ್ನು ಹೊರಡಿಸತಕ್ಕದ್ದಲ್ಲ.

**6. ಅಧಿಕಾರ ವ್ಯಾಪ್ತಿ ಮತ್ತು ಪ್ರಕ್ರಿಯೆ.**- (1) ಯಾರೇ ಮಕ್ಕಳ ಅಥವಾ ಸಂಬಂಧಿಯ ವಿರುದ್ಧ,-

(ಎ) ಅವನು ವಾಸಿಸುತ್ತಿರುವ ಅಥವಾ ಕೊನೆಯಲ್ಲಿ ವಾಸಿಸುತ್ತಿದ್ದ; ಅಥವಾ

(ಬಿ) ಮಕ್ಕಳು ಅಥವಾ ಸಂಬಂಧಿಯು ವಾಸಿಸುತ್ತಿರುವ

– ಯಾವುದೇ ಜಿಲ್ಲೆಯಲ್ಲಿ 5ನೇ ಪ್ರಕರಣದ ಮೇರೆಗೆ ವ್ಯವಹರಣೆಗಳನ್ನು ಕೈಗೊಳ್ಳಬಹುದು.

(2) 5ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ನ್ಯಾಯಾಧಿಕರಣವು, ಯಾರ ವಿರುದ್ಧ ಅರ್ಜಿ ಸಲ್ಲಿಸಲಾಗಿದೆಯೋ ಆ ಮಕ್ಕಳು ಅಥವಾ ಸಂಬಂಧಿಯು ಹಾಜರಾಗುವಂತೆ ಮಾಡುವುದಕ್ಕಾಗಿ ಪ್ರೊಸೆಸನ್ನು ಹೊರಡಿಸತಕ್ಕದ್ದು.

(3) ಮಕ್ಕಳ ಅಥವಾ ಸಂಬಂಧಿಯ ಹಾಜರಾತಿಯನ್ನು ಸುನಿಶ್ಚಿತಪಡಿಸುವುದಕ್ಕಾಗಿ, ನ್ಯಾಯಾಧಿಕರಣವು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಉಪಬಂಧಿಸಲಾದಂತೆ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ ಅಧಿಕಾರವನ್ನು ಹೊಂದಿರತಕ್ಕದ್ದು.

(4) ಪಾಲನೆ–ಪೋಷಣೆಗೆ ಹಣ ಸಂದಾಯ ಮಾಡುವಂತೆ ಯಾವ ಮಕ್ಕಳಿಗೆ ಅಥವಾ ಸಂಬಂಧಿಗೆ ಆದೇಶ ಮಾಡಲು ಉದ್ದೇಶಿಸಲಾಗಿದೆಯೋ ಆ ಮಕ್ಕಳ ಅಥವಾ ಸಂಬಂಧಿಯ ಸಮ್ಮುಖದಲ್ಲಿಯೇ ಅಂಥ ವ್ಯವಹರಣೆಗಳ ಎಲ್ಲಾ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಸಮನುಗಳ ಪ್ರಕರಣಗಳಿಗೆ ನಿಯಮಿಸಿದ ರೀತಿಯಲ್ಲಿ ಅದನ್ನು ದಾಖಲಿಸತಕ್ಕದ್ದು:

ಪರಂತು, ಪಾಲನೆ–ಪೋಷಣೆಗೆ ಹಣ ಸಂದಾಯ ಮಾಡುವಂತೆ ಯಾವ ಮಕ್ಕಳಿಗೆ ಅಥವಾ ಸಂಬಂಧಿಗೆ ಆದೇಶವನ್ನು ಮಾಡಲು ಉದ್ದೇಶಿಸಲಾಗಿದೆಯೋ ಆ ಮಕ್ಕಳು ಅಥವಾ ಸಂಬಂಧಿಯು ಉದ್ದೇಶಪೂರ್ವಕವಾಗಿ ಸಮನಿನ ಜಾರಿಯನ್ನು ತಪ್ಪಿಸಿಕೊಳ್ಳುತ್ತಿದ್ದಾರೆ ಅಥವಾ ಉದ್ದೇಶಪೂರ್ವಕವಾಗಿ ನ್ಯಾಯಾಧಿಕರಣದ ಮುಂದೆ ಹಾಜರಾಗುವುದಕ್ಕೆ ನಿರ್ಲಕ್ಷಿಸುತ್ತಿದ್ದಾರೆ ಎಂದು ನ್ಯಾಯಾಧಿಕರಣಕ್ಕೆ ಮನವರಿಕೆಯಾದರೆ, ನ್ಯಾಯಾಧಿಕರಣವು ವಿಚಾರಣೆಯನ್ನು ಮುಂದುವರಿಸಬಹುದು ಮತ್ತು ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಬಹುದು.

(5) ಮಕ್ಕಳು ಅಥವಾ ಸಂಬಂಧಿಯು ಭಾರತದ ಹೊರಗೆ ವಾಸವಾಗಿದ್ದರೆ, ಕೇಂದ್ರ ಸರ್ಕಾರವು ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರದ ಮೂಲಕ ನ್ಯಾಯಾಧಿಕರಣವು ಸಮನುಗಳನ್ನು ಜಾರಿ ಮಾಡತಕ್ಕದ್ದು.

(6) ನ್ಯಾಯಾಧಿಕರಣವು 5ನೇ ಪ್ರಕರಣದ ಮೇರೆಗೆ ಅರ್ಜಿಯ ವಿಚಾರಣೆ ಮಾಡುವ ಮೊದಲು ಅದನ್ನು ಸಂಧಾನಾಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಅಂಥ ಸಂಧಾನಾಧಿಕಾರಿಯು ಒಂದು ತಿಂಗಳೊಳಗೆ ತನ್ನ ನಿರ್ಣಯಗಳನ್ನು ಸಲ್ಲಿಸತಕ್ಕದ್ದು ಮತ್ತು ಸೌಹಾರ್ದಯುತವಾಗಿ ಅದು ಇತ್ಯರ್ಥವಾಗಿದ್ದರೆ, ನ್ಯಾಯಾಧಿಕರಣವು ಆ ಬಗ್ಗೆ ಒಂದು ಆದೇಶವನ್ನು ಹೊರಡಿಸತಕ್ಕದ್ದು.

**ವಿವರಣೆ**: ಈ ಪ್ರಕರಣದ ಉದ್ದೇಶಗಳಿಗಾಗಿ, "ಸಂಧಾನಾಧಿಕಾರಿ" ಎಂದರೆ, 5ನೇ ಪ್ರಕರಣದ (1)ನೇ ಉಪಪ್ರಕರಣದ ವಿವರಣೆಯಲ್ಲಿ ಉಲ್ಲೇಖಿಸಿದ ಸಂಸ್ಥೆಯ ಯಾರೇ ವ್ಯಕ್ತಿ ಅಥವಾ ಪ್ರತಿನಿಧಿ

ಅಥವಾ 18ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಗೊತ್ತುಪಡಿಸಿದ ಪಾಲನೆ–ಪೋಷಣೆ ಅಧಿಕಾರಿಗಳು ಅಥವಾ ನ್ಯಾಯಾಧಿಕರಣವು ಈ ಉದ್ದೇಶಕ್ಕಾಗಿ ನಾಮನಿರ್ದೇಶಿಸಿದ ಯಾರೇ ಇತರ ವ್ಯಕ್ತಿ.

**7. ಪಾಲನೆ–ಪೋಷಣೆ ನ್ಯಾಯಾಧಿಕರಣದ ರಚನೆ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, 5ನೇ ಪ್ರಕರಣದ ಮೇರೆಗಿನ ಪಾಲನೆ–ಪೋಷಣೆ ಕುರಿತ ಆದೇಶದ ಮೇಲೆ ನ್ಯಾಯ ನಿರ್ಣಯ ಮಾಡುವ ಮತ್ತು ತೀರ್ಮಾನಿಸುವ ಉದ್ದೇಶಕ್ಕಾಗಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಪ್ರತಿಯೊಂದು ಉಪ–ವಿಭಾಗಕ್ಕೆ ಒಂದು ಅಥವಾ ಹೆಚ್ಚು ನ್ಯಾಯಾಧಿಕರಣಗಳನ್ನು ರಚಿಸತಕ್ಕದ್ದು.

(2) ರಾಜ್ಯದ ಉಪ–ವಿಭಾಗಾಧಿಕಾರಿಯ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿಯು ನ್ಯಾಯಾಧಿಕರಣದ ಅಧ್ಯಕ್ಷತೆ ವಹಿಸತಕ್ಕದ್ದು.

(3) ಯಾವುದೇ ಪ್ರದೇಶಕ್ಕಾಗಿ ಎರಡು ಅಥವಾ ಹೆಚ್ಚು ನ್ಯಾಯಾಧಿಕರಣಗಳನ್ನು ರಚಿಸಿರುವಲ್ಲಿ, ರಾಜ್ಯ ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅವುಗಳ ನಡುವೆ ವ್ಯವಹಾರಗಳ ಹಂಚಿಕೆಯನ್ನು ವಿನಿಯಮಿಸತಕ್ಕದ್ದು.

**8. ವಿಚಾರಣೆಯ ಸಂದರ್ಭದಲ್ಲಿ ಕ್ಷಿಪ್ರ ಪ್ರಕ್ರಿಯೆ.–** (1) 5ನೇ ಪ್ರಕರಣದ ಮೇರೆಗೆ ಯಾವುದೇ ವಿಚಾರಣೆಯನ್ನು ನಡೆಸುವಲ್ಲಿ, ನ್ಯಾಯಾಧಿಕರಣವು, ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಯಾವುದೇ ನಿಯಮಗಳಿಗೊಳಪಟ್ಟು ತಾನು ಸೂಕ್ತವೆಂದು ಭಾವಿಸಬಹುದಾದಂಥ ಕ್ಷಿಪ್ರ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

(2) ನ್ಯಾಯಾಧಿಕರಣವು, ಪ್ರಮಾಣ ಮಾಡಿಸಿ ಸಾಕ್ಷ್ಯವನ್ನು ಸ್ವೀಕರಿಸುವ ಮತ್ತು ಸಾಕ್ಷಿದಾರರ ಹಾಜರಾತಿಯನ್ನು ಒತ್ತಾಯಿಸುವ ಮತ್ತು ದಸ್ತಾವೇಜುಗಳನ್ನು ಮತ್ತು ಮುದ್ದೆಮಾಲುಗಳನ್ನು ಶೋಧನೆ ಮಾಡುವ ಮತ್ತು ಅವುಗಳನ್ನು ಹಾಜರುಪಡಿಸುವ ಉದ್ದೇಶಕ್ಕಾಗಿ ಮತ್ತು ನಿಯಮಿಸಬಹುದಾದಂಥ ಇತರೆ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು; ಮತ್ತು ನ್ಯಾಯಾಧಿಕರಣವನ್ನು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 195ನೇ ಪ್ರಕರಣದ ಮತ್ತು ಅಧ್ಯಾಯ XXVIರ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

(3) ಪಾಲನೆ– ಪೋಷಣೆಗಾಗಿ ಯಾವುದೇ ಕ್ಲೇಮಿನ ಬಗ್ಗೆ ನ್ಯಾಯ ನಿರ್ಣಯ ಮಾಡುವ ಮತ್ತು ತೀರ್ಮಾನಿಸುವ ಉದ್ದೇಶಕ್ಕಾಗಿ ನ್ಯಾಯಾಧಿಕರಣವು ವಿಚಾರಣೆ ನಡೆಸುವಲ್ಲಿ ತನಗೆ ನೆರವು ನೀಡಲು, ವಿಚಾರಣೆಗೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ವಿಶೇಷ ಜ್ಞಾನ ಹೊಂದಿರುವ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು ಈ ಸಂಬಂಧವಾಗಿ ರಚಿಸಬಹುದಾದ ಯಾವುದೇ ನಿಯಮಕ್ಕೊಳಪಟ್ಟು, ಆಯ್ಕೆ ಮಾಡಿಕೊಳ್ಳಬಹುದು.

**9. ಪಾಲನೆ-ಪೋಷಣೆಗೆ ಆದೇಶ.**- (1) ತನ್ನನ್ನು ತಾನೇ ಪಾಲನೆ-ಪೋಷಣೆ ಮಾಡಿಕೊಳ್ಳಲು ಅಸಮರ್ಥನಾಗಿರುವ ಹಿರಿಯ ನಾಗರಿಕರನ್ನು ಮಕ್ಕಳು ಅಥವಾ ಸಂದರ್ಭಾನುಸಾರ, ಸಂಬಂಧಿಕರು ಪಾಲನೆ-ಪೋಷಣೆ ಮಾಡಲು ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ, ನ್ಯಾಯಾಧಿಕರಣವು, ಹಾಗೆ ನಿರ್ಲಕ್ಷ್ಯ ಮಾಡಲಾಗಿದೆ ಅಥವಾ ನಿರಾಕರಣೆ ಮಾಡಲಾಗಿದೆ ಎಂಬುದನ್ನು ಮನದಟ್ಟು ಮಾಡಿಕೊಂಡ ಮೇಲೆ, ನ್ಯಾಯಾಧಿಕರಣವು ಸೂಕ್ತವೆಂದು ಭಾವಿಸಬಹುದಾದಂತೆ, ಅಂಥ ಹಿರಿಯ ನಾಗರಿಕರ ಪಾಲನೆ-ಪೋಷಣೆಗಾಗಿ ಅಂಥ ಮಾಸಿಕ ದರದಲ್ಲಿ ಮಾಸಿಕ ಭತ್ಯೆಯನ್ನು ನೀಡಲು ಮತ್ತು ನ್ಯಾಯಾಧಿಕರಣವು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂಥ ಹಿರಿಯ ನಾಗರಿಕರಿಗೆ ಅದನ್ನು ಸಂದಾಯ ಮಾಡಲು ಅಂಥ ಮಕ್ಕಳಿಗೆ ಅಥವಾ ಸಂಬಂಧಿಕರಿಗೆ ಆದೇಶಿಸಬಹುದು.

(2) ಅಂಥ ನ್ಯಾಯಾಧಿಕರಣವು ಆದೇಶಿಸಬಹುದಾದಂಥ ಗರಿಷ್ಠ ಪಾಲನೆ-ಪೋಷಣೆ ಭತ್ಯೆಯು, ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು, ಅದು ತಿಂಗಳಿಗೆ ಹತ್ತು ಸಾವಿರ ರೂಪಾಯಿಗಳನ್ನು ಮೀರತಕ್ಕದ್ದಲ್ಲ.

**10. ಭತ್ಯೆಯ ಮೊಬಲಗಿನಲ್ಲಿ ಬದಲಾವಣೆ.**- (1) 9ನೇ ಪ್ರಕರಣದ ಮೇರೆಗೆ ಪಾಲನೆ-ಪೋಷಣೆಗಾಗಿ ಮಾಸಿಕ ಭತ್ಯೆಯನ್ನು ಸಂದಾಯ ಮಾಡುವಂತೆ ಆದೇಶಿಸಲಾಗಿರುವ ಮಾಸಿಕ ಭತ್ಯೆಯನ್ನು ಆ ಪ್ರಕರಣದ ಮೇರೆಗೆ ಪಡೆಯುತ್ತಿರುವ ಯಾರೇ ವ್ಯಕ್ತಿಯ ಸಂಬಂಧದಲ್ಲಿ ತಪ್ಪು ನಿರೂಪಣೆಯಾಗಿರುವುದು ಅಥವಾ ಸಂಗತಿಯ ತಪ್ಪುಗ್ರಹಿಕೆಯಾಗಿರುವುದು ಅಥವಾ ಅವನ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿರುವುದು ರುಜುವಾತಾದಾಗ, ನ್ಯಾಯಾಧಿಕರಣವು ಪಾಲನೆ-ಪೋಷಣೆ ಭತ್ಯೆಯಲ್ಲಿ ತಾನು ಸೂಕ್ತವೆಂದು ಭಾವಿಸುವಂಥ ಬದಲಾವಣೆಯನ್ನು ಮಾಡಬಹುದು.

(2) ಸಕ್ಷಮ ಸಿವಿಲ್ ನ್ಯಾಯಾಲಯದ ಯಾವುದೇ ತೀರ್ಮಾನದ ಪರಿಣಾಮವಾಗಿ 9ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ರದ್ದು ಮಾಡಬೇಕೆಂದು ಅಥವಾ ವ್ಯತ್ಯಸ್ತಗೊಳಿಸಬೇಕೆಂದು ನ್ಯಾಯಾಧಿಕರಣಕ್ಕೆ ಕಂಡುಬಂದಲ್ಲಿ, ಅದು ತದನುಸಾರವಾಗಿ ಆ ಆದೇಶವನ್ನು ರದ್ದುಗೊಳಿಸತಕ್ಕದ್ದು ಅಥವಾ ಸಂದರ್ಭಾನುಸಾರ ಅದನ್ನು ವ್ಯತ್ಯಸ್ತಗೊಳಿಸತಕ್ಕದ್ದು.

**11. ಪಾಲನೆ-ಪೋಷಣೆ ಆದೇಶದ ಜಾರಿ.**- (1) ವ್ಯವಹರಣೆಗಳ ವೆಚ್ಚಗಳಿಗೆ ಸಂಬಂಧಿಸಿದ ಆದೇಶದ ಪ್ರತಿಯೂ ಸೇರಿದಂತೆ ಪಾಲನೆ-ಪೋಷಣೆ ಆದೇಶದ ಒಂದು ಪ್ರತಿಯನ್ನು, ಅದನ್ನು ಯಾರ ಸಲುವಾಗಿ ಮಾಡಲಾಗಿದೆಯೋ ಆ ಹಿರಿಯ ನಾಗರಿಕನಿಗೆ ಅಥವಾ ಸಂದರ್ಭಾನುಸಾರ ತಂದೆ ತಾಯಿಗೆ ಯಾವುದೇ ಶುಲ್ಕವನ್ನು ಪಡೆಯದೆ ನೀಡತಕ್ಕದ್ದು ಮತ್ತು ಅಂಥ ಆದೇಶವನ್ನು ಯಾರ ವಿರುದ್ಧ ಮಾಡಲಾಗಿದೆಯೋ ಆ ವ್ಯಕ್ತಿಯು ಇರುವ ಯಾವುದೇ ಸ್ಥಳದಲ್ಲಿನ ಯಾವುದೇ ನ್ಯಾಯಾಧಿಕರಣವು, ಪಕ್ಷಕಾರರ ಗುರುತಿನ ಬಗ್ಗೆ ಮತ್ತು ಸಂದರ್ಭಾನುಸಾರ, ಬಾಕಿಯಿರುವ ಭತ್ಯೆಯನ್ನು ಅಥವಾ ವೆಚ್ಚಗಳನ್ನು ಸಂದಾಯ ಮಾಡಿಲ್ಲದಿರುವುದನ್ನು ಮನವರಿಕೆ ಮಾಡಿಕೊಂಡ ಮೇಲೆ ಜಾರಿ ಮಾಡಬಹುದು.

(2) ಈ ಅಧಿನಿಯಮದ ಮೇರೆಗೆ ಮಾಡಿದ ಪಾಲನೆ-ಪೋಷಣೆ ಆದೇಶವು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಅಧ್ಯಾಯ IXರ ಮೇರೆಗೆ ಹೊರಡಿಸಿದ ಆದೇಶದಂತೆ ಅದೇ ಬಲವನ್ನು ಮತ್ತು ಪರಿಣಾಮವನ್ನು ಹೊಂದಿರತಕ್ಕದ್ದು ಮತ್ತು ಅಂಥ ಆದೇಶದ ಜಾರಿಗಾಗಿ ಆ ಸಂಹಿತೆಯ ಮೂಲಕ ನಿಯಮಿಸಲಾಗಿರುವ ರೀತಿಯಲ್ಲಿ ಅದನ್ನು ಜಾರಿಗೊಳಿಸತಕ್ಕದ್ದು.

**12. ಕೆಲವು ಪ್ರಕರಣಗಳಲ್ಲಿ ಪಾಲನೆ- ಪೋಷಣೆಗೆ ಸಂಬಂಧಿಸಿದಂತೆ ಆಯ್ಕೆಯ ಅವಕಾಶ.-** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಅಧ್ಯಾಯ IXರಲ್ಲಿ ಏನೇ ಒಳಗೊಂಡಿದ್ದರೂ, ಸದರಿ ಅಧ್ಯಾಯದ ಮೇರೆಗೆ ಹಿರಿಯ ನಾಗರಿಕನು ಅಥವಾ ತಂದೆ- ತಾಯಿಯು ಪಾಲನೆ-ಪೋಷಣೆ ಭತ್ಯೆಗೆ ಹಕ್ಕುಳ್ಳವರಾಗಿದ್ದಲ್ಲಿ ಮತ್ತು ಈ ಅಧಿನಿಯಮದ ಮೇರೆಗೂ ಸಹ ಪಾಲನೆ - ಪೋಷಣೆಗೆ ಹಕ್ಕುಳ್ಳವರಾಗಿದ್ದಲ್ಲಿ, ಸದರಿ ಸಂಹಿತೆಯ ಅಧ್ಯಾಯ IXರ ಉಪಬಂಧಗಳಿಗೆ ಬಾಧಕವಾಗದಂತೆ, ಅಂಥ ಪಾಲನೆ-ಪೋಷಣೆಯನ್ನು, ಅವೆರಡರಲ್ಲಿ ಯಾವುದಾದರೊಂದು ಅಧಿನಿಯಮದ ಮೇರೆಗೆ ಕ್ಲೇಮು ಮಾಡಬಹುದೇ ಹೊರತು ಅವೆರಡೂ ಅಧಿನಿಯಮಗಳ ಮೇರೆಗೆ ಅಲ್ಲ.

**13. ಪಾಲನೆ-ಪೋಷಣೆಯ ಹಣವನ್ನು ಠೇವಣಿಯಿಡುವುದು.-** ಈ ಅಧ್ಯಾಯದ ಮೇರೆಗೆ ಆದೇಶವನ್ನು ಮಾಡಿದಾಗ, ಅಂಥ ಆದೇಶದ ಪ್ರಕಾರ ಯಾವುದೇ ಮೊಬಲಗನ್ನು ಸಂದಾಯ ಮಾಡುವಂತೆ ಯಾವ ಮಕ್ಕಳನ್ನು ಮತ್ತು ಸಂಬಂಧಿಯನ್ನು ಅಗತ್ಯಪಡಿಸಲಾಗಿದೆಯೋ ಆ ಮಕ್ಕಳು ಅಥವಾ ಸಂಬಂಧಿಯು, ನ್ಯಾಯಾಧಿಕರಣವು ಆದೇಶವನ್ನು ಘೋಷಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ, ಹಾಗೆ ಆದೇಶಿಸಿದ ಅಷ್ಟೂ ಹಣವನ್ನು ನ್ಯಾಯಾಧಿಕರಣವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಠೇವಣಿ ಇಡತಕ್ಕದ್ದು.

**14. ಯಾವುದೇ ಕ್ಲೇಮನ್ನು ಅಂಗೀಕರಿಸಿದಲ್ಲಿ ಬಡ್ಡಿಗೆ ಆದೇಶಿಸುವುದು.-** ಯಾವುದೇ ನ್ಯಾಯಾಧಿಕರಣವು ಈ ಅಧಿನಿಯಮದ ಮೇರೆಗೆ ಪಾಲನೆ-ಪೋಷಣೆಗೆ ಆದೇಶ ಮಾಡಿರುವಲ್ಲಿ, ಅಂಥ ನ್ಯಾಯಾಧಿಕರಣವು ಪಾಲನೆ-ಪೋಷಣೆ ಮೊಬಲಗಿನ ಜೊತೆಗೆ, ನ್ಯಾಯಾಧಿಕರಣವು ನಿರ್ಧರಿಸ ಬಹುದಾದಂಥ ದರದಲ್ಲಿ ಮತ್ತು ಅರ್ಜಿಯನ್ನು ಸಲ್ಲಿಸಿದ ದಿನಾಂಕಕ್ಕಿಂತ ಮುಂಚಿನದಲ್ಲದ ದಿನಾಂಕದಿಂದ ಸರಳ ಬಡ್ಡಿಯನ್ನು ಸಹ ಸಂದಾಯ ಮಾಡತಕ್ಕದ್ದು, ಈ ಸರಳ ಬಡ್ಡಿಯು ಶೇಕಡಾ ಐದಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಶೇಕಡಾ ಹದಿನೆಂಟಕ್ಕಿಂತ ಹೆಚ್ಚು ಇರತಕ್ಕದ್ದಲ್ಲ:

ಪರಂತು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಅಧ್ಯಾಯ-IX ರ ಮೇರೆಗೆ ಪಾಲನೆ-ಪೋಷಣೆಗಾಗಿ ಸಲ್ಲಿಸಿದ ಯಾವುದೇ ಅರ್ಜಿಯು ಈ ಅಧಿನಿಯಮದ ಪ್ರಾರಂಭದಲ್ಲಿ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವಲ್ಲಿ, ನ್ಯಾಯಾಲಯವು ತಂದೆ- ತಾಯಿಯ ಕೋರಿಕೆ ಮೇಲೆ ಅಂಥ ಅರ್ಜಿಯನ್ನು ಹಿಂದಕ್ಕೆ ಪಡೆಯಲು ಅನುಮತಿಸತಕ್ಕದ್ದು ಮತ್ತು ಆ ತಂದೆ- ತಾಯಿಯು ಪಾಲನೆ-ಪೋಷಣೆಗಾಗಿ ನ್ಯಾಯಾಧಿಕರಣದ ಮುಂದೆ ಅರ್ಜಿ ಸಲ್ಲಿಸುವುದಕ್ಕೆ ಹಕ್ಕುಳ್ಳವರಾಗಿರತಕ್ಕದ್ದು.

**15. ಅಪೀಲು ನ್ಯಾಯಾಧಿಕರಣದ ಸ್ಥಾಪನೆ.–** (1) ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನ್ಯಾಯಾಧಿಕರಣದ ಆದೇಶದ ವಿರುದ್ಧದ ಅಪೀಲನ್ನು ವಿಚಾರಣೆ ಮಾಡಲು ಪ್ರತಿಯೊಂದು ಜಿಲ್ಲೆಗೂ ಒಂದು ಅಪೀಲು ನ್ಯಾಯಾಧಿಕರಣವನ್ನು ಸ್ಥಾಪಿಸತಕ್ಕದ್ದು.

(2) ಜಿಲ್ಲಾ ಮ್ಯಾಜಿಸ್ಟ್ರೇಟನ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿಯು ಅಪೀಲು ನ್ಯಾಯಾಧಿಕರಣದ ಅಧ್ಯಕ್ಷತೆ ವಹಿಸತಕ್ಕದ್ದು.

**16. ಅಪೀಲುಗಳು.–** (1) ನ್ಯಾಯಾಧಿಕರಣದ ಆದೇಶದಿಂದ ಬಾಧಿತರಾದ ಯಾರೇ ಹಿರಿಯ ನಾಗರಿಕನು ಅಥವಾ ಸಂದರ್ಭಾನುಸಾರ ತಂದೆ–ತಾಯಿಯು ಆದೇಶದ ದಿನಾಂಕದಿಂದ ಅರವತ್ತು ದಿವಸಗಳೊಳಗೆ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಹಾಗೆ ಅಪೀಲು ಸಲ್ಲಿಸಿರುವಾಗ, ಅಂಥ ಪಾಲನೆ–ಪೋಷಣೆ ಆದೇಶದ ಮೇರೆಗೆ ಯಾವುದೇ ಮೊಬಲಗನ್ನು ಸಂದಾಯ ಮಾಡುವಂತೆ ಯಾವ ಮಕ್ಕಳನ್ನು ಅಥವಾ ಸಂಬಂಧಿಯನ್ನು ಅಗತ್ಯಪಡಿಸಲಾಗಿದೆಯೋ ಅಂಥ ಮಕ್ಕಳು ಅಥವಾ ಸಂಬಂಧಿಯು, ಹಾಗೆ ಆದೇಶಿಸಿರುವಂಥ ಮೊಬಲಗನ್ನು ಅಪೀಲು ನ್ಯಾಯಾಧಿಕರಣವು ನಿರ್ದೇಶಿಸಿದ ರೀತಿಯಲ್ಲಿ ಅಂಥ ತಂದೆ–ತಾಯಿಗೆ ಸಂದಾಯ ಮಾಡುತ್ತಿರುವುದನ್ನು ಮುಂದುವರಿಸಿಕೊಂಡು ಹೋಗತಕ್ಕದ್ದು:

ಮತ್ತು ಪರಂತು, ಅಪೀಲುದಾರನು ಸಕಾಲದಲ್ಲಿ ಅಪೀಲು ಸಲ್ಲಿಸಲು ಸಾಕಷ್ಟು ಕಾರಣದಿಂದಾಗಿ ಅಡ್ಡಿಯುಂಟಾಗಿತ್ತೆಂದು ಅಪೀಲು ನ್ಯಾಯಾಧಿಕರಣಕ್ಕೆ ಮನದಟ್ಟಾದರೆ, ಅದು ಅರವತ್ತು ದಿವಸಗಳ ಸದರಿ ಅವಧಿಯು ಮುಕ್ತಾಯವಾದ ನಂತರವೂ ಅಪೀಲನ್ನು ಪುರಸ್ಕರಿಸಬಹುದು.

(2) ಅಪೀಲು ನ್ಯಾಯಾಧಿಕರಣವು, ಅಪೀಲನ್ನು ಸ್ವೀಕರಿಸಿದ ಮೇಲೆ, ಪ್ರತಿವಾದಿಗೆ ನೋಟೀಸ್ ಜಾರಿ ಮಾಡಿಸತಕ್ಕದ್ದು.

(3) ಅಪೀಲು ನ್ಯಾಯಾಧಿಕರಣವು ಯಾವ ನ್ಯಾಯಾಧಿಕರಣದ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ನ್ಯಾಯಾಧಿಕರಣದಿಂದ ವ್ಯವಹರಣೆಗಳ ದಾಖಲೆಗಳನ್ನು ತರಿಸಿಕೊಳ್ಳಬಹುದು.

(4) ಅಪೀಲು ನ್ಯಾಯಾಧಿಕರಣವು ಅಪೀಲನ್ನು ಮತ್ತು ತರಿಸಿಕೊಂಡ ದಾಖಲೆಗಳನ್ನು ಪರಿಶೀಲಿಸಿದ ನಂತರ, ಅಪೀಲನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

(5) ಅಪೀಲು ನ್ಯಾಯಾಧಿಕರಣವು ನ್ಯಾಯಾಧಿಕರಣದ ಆದೇಶದ ವಿರುದ್ಧ ಸಲ್ಲಿಸಿದ ಅಪೀಲಿನ ಮೇಲೆ ನ್ಯಾಯ ನಿರ್ಣಯ ಮಾಡತಕ್ಕದ್ದು ಮತ್ತು ತೀರ್ಮಾನಿಸತಕ್ಕದ್ದು ಮತ್ತು ಅಪೀಲು ನ್ಯಾಯಾಧಿಕರಣದ ಆದೇಶವು ಅಂತಿಮವಾದುದಾಗಿರತಕ್ಕದ್ದು:

ಪರಂತು, ಇಬ್ಬರೂ ಪಕ್ಷಕಾರರಿಗೆ ಖುದ್ದಾಗಿ ಅಥವಾ ಕ್ರಮಬದ್ಧವಾಗಿ ಅಧಿಕೃತಗೊಳಿಸಲಾದ ಪ್ರತಿನಿಧಿಯ ಮುಖಾಂತರ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ್ದ ಹೊರತು ಯಾವುದೇ ಅಪೀಲನ್ನು ತಿರಸ್ಕರಿಸತಕ್ಕದ್ದಲ್ಲ.

(6) ಅಪೀಲು ನ್ಯಾಯಾಧಿಕರಣವು ಅಪೀಲನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ತನ್ನ ಲಿಖಿತ ಆದೇಶವನ್ನು ಘೋಷಿಸಲು ಪ್ರಯತ್ನ ಮಾಡತಕ್ಕದ್ದು.

(7) (5)ನೇ ಉಪ–ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶದ ಒಂದು ಪ್ರತಿಯನ್ನು ಇಬ್ಬರೂ ಪಕ್ಷಕಾರರಿಗೆ ಉಚಿತವಾಗಿ ಕಳುಹಿಸತಕ್ಕದ್ದು.

**17. ಕಾನೂನುಸಮ್ಮತ ಪ್ರಾತಿನಿಧ್ಯಕ್ಕೆ ಹಕ್ಕು.–** ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ನ್ಯಾಯಾಧಿಕರಣದ ಅಥವಾ ಅಪೀಲು ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಗಳ ಯಾರೇ ಪಕ್ಷಕಾರನನ್ನು ನ್ಯಾಯವಾದಿಯು ಪ್ರತಿನಿಧಿಸತಕ್ಕದ್ದಲ್ಲ.

**18. ಪಾಲನೆ–ಪೋಷಣೆ ಅಧಿಕಾರಿ.–** (1) ರಾಜ್ಯ ಸರ್ಕಾರವು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯನ್ನು ಅಥವಾ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯ ದರ್ಜೆಗಿಂತ ಕಡಿಮೆ ಇಲ್ಲದ ಯಾವುದೇ ಹೆಸರಿನಿಂದ ಕರೆಯಲಾಗುವ ಒಬ್ಬ ಅಧಿಕಾರಿಯನ್ನು, ಪಾಲನೆ–ಪೋಷಣೆ ಅಧಿಕಾರಿಯಾಗಿ ಗೊತ್ತುಪಡಿಸಬಹುದು.

(2) (1)ನೇ ಉಪ–ಪ್ರಕರಣದಲ್ಲಿ ತಿಳಿಸಿದ ಪಾಲನೆ–ಪೋಷಣೆ ಅಧಿಕಾರಿಯು, ನ್ಯಾಯಾಧಿಕರಣದ ಅಥವಾ ಸಂದರ್ಭಾನುಸಾರ, ಅಪೀಲು ನ್ಯಾಯಾಧಿಕರಣದ ವ್ಯವಹರಣೆಗಳಲ್ಲಿ ತಂದೆ–ತಾಯಿಯನ್ನು ಪ್ರತಿನಿಧಿಸಲು ಅಪೇಕ್ಷಿಸಿದರೆ ಅವನು ಹಾಗೆ ಮಾಡತಕ್ಕದ್ದು.

## ಅಧ್ಯಾಯ –III
## ವೃದ್ಧಾಶ್ರಮಗಳ ಸ್ಥಾಪನೆ

**19. ವೃದ್ಧಾಶ್ರಮಗಳ ಸ್ಥಾಪನೆ.–** (1) ರಾಜ್ಯ ಸರ್ಕಾರವು ನಿರ್ಗತಿಕರಾಗಿರುವ ಕನಿಷ್ಠ ನೂರಾ ಐವತ್ತು ಹಿರಿಯ ನಾಗರಿಕರಿಗೆ ವೃದ್ಧಾಶ್ರಮಗಳಲ್ಲಿ ವಸತಿ ಅನುಕೂಲ ಕಲ್ಪಿಸುವುದಕ್ಕಾಗಿ ಪ್ರಾರಂಭದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಕನಿಷ್ಠ ಒಂದರಂತೆ, ನಂತರ ಹಂತಹಂತವಾಗಿ ತಾನು ಅವಶ್ಯವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ವೃದ್ಧಾಶ್ರಮಗಳನ್ನು ಸುಲಭವಾಗಿ ಹೋಗಿಬರಲು ಅನುಕೂಲವಿರುವ ಸ್ಥಳಗಳಲ್ಲಿ ಸ್ಥಾಪಿಸಬಹುದು ಮತ್ತು ನಿರ್ವಹಿಸಿಕೊಂಡು ಬರಬಹುದು.

(2) ರಾಜ್ಯ ಸರ್ಕಾರವು ವೃದ್ಧಾಶ್ರಮ ವಾಸಿಗಳಿಗೆ ವೈದ್ಯೋಪಚಾರಕ್ಕಾಗಿ ಮತ್ತು ಮನರಂಜನಾ ಸಾಧನ ಸೌಲಭ್ಯಗಳಿಗಾಗಿ ಅವಶ್ಯಕವಾಗಿರುವ ಗುಣಮಟ್ಟಗಳನ್ನು ಮತ್ತು ವಿವಿಧ ರೀತಿಯ ಸೇವೆಗಳನ್ನು ವೃದ್ಧಾಶ್ರಮಗಳು ಒದಗಿಸುವುದೂ ಸೇರಿದಂತೆ ವೃದ್ಧಾಶ್ರಮಗಳ ನಿರ್ವಹಣೆಗಾಗಿ ಒಂದು ಕಾರ್ಯಯೋಜನೆಯನ್ನು ನಿಯಮಿಸಬಹುದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ "ನಿರ್ಗತಿಕ" ಎಂದರೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಿದಂತೆ ತನ್ನ ಜೀವನ ನಿರ್ವಹಣೆಗೆ ಸಾಕಷ್ಟು ಅನುಕೂಲಗಳನ್ನು ಹೊಂದಿಲ್ಲದಿರುವ ಯಾರೇ ಹಿರಿಯ ನಾಗರಿಕ.

## ಅಧ್ಯಾಯ – IV
## ಹಿರಿಯ ನಾಗರಿಕರ ವೈದ್ಯೋಪಚಾರಗಳಿಗಾಗಿ ಏರ್ಪಾಟುಗಳು

**20. ಹಿರಿಯ ನಾಗರಿಕರಿಗೆ ವೈದ್ಯಕೀಯ ನೆರವು.–** ರಾಜ್ಯ ಸರ್ಕಾರವು,–

(i) ಸರ್ಕಾರಿ ಆಸ್ಪತ್ರೆಗಳು ಅಥವಾ ಸಂಪೂರ್ಣವಾಗಿ ಅಥವಾ ಭಾಗಶಃ ಸರ್ಕಾರದಿಂದ ಹಣಕಾಸು ನೆರವು ಪಡೆಯುತ್ತಿರುವ ಆಸ್ಪತ್ರೆಗಳು ಸಾಧ್ಯವಾದಷ್ಟುಮಟ್ಟಿಗೆ ಎಲ್ಲಾ ಹಿರಿಯ ನಾಗರಿಕರಿಗೆ ಹಾಸಿಗೆಗಳನ್ನು ಒದಗಿಸುವಂತೆ;

(ii) ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ಸರತಿ ಸಾಲುಗಳನ್ನು ವ್ಯವಸ್ಥೆ ಮಾಡುವಂತೆ;

(iii) ದೀರ್ಘಕಾಲಿಕ, ಮಾರಣಾಂತಿಕ ಮತ್ತು ದಿನೇ ದಿನೇ ದೈಹಿಕ ಶಕ್ತಿ ಕ್ಷೀಣಿಸುವಂತೆ ಮಾಡುವ ಕಾಯಿಲೆಗಳ ಚಿಕಿತ್ಸೆಗಾಗಿ ಸೌಲಭ್ಯವನ್ನು ಹಿರಿಯ ನಾಗರಿಕರಿಗೂ ವಿಸ್ತರಿಸುವಂತೆ;

(iv) ಮುಪ್ಪಾದವರಿಗೆ ಬರುವ ದೀರ್ಘಕಾಲೀನ ಕಾಯಿಲೆಗಳ ಬಗ್ಗೆ ಮತ್ತು ಮುಪ್ಪಾಗುವುದರ ಬಗ್ಗೆ ಸಂಶೋಧನಾ ಚಟುವಟಿಕೆಗಳನ್ನು ವಿಸ್ತರಿಸುವಂತೆ;

(v) ವೃದ್ಧಾಪ್ಯ ಆರೈಕೆಯಲ್ಲಿ ಅನುಭವ ಹೊಂದಿರುವ ವೈದ್ಯಾಧಿಕಾರಿಯು ಮುಖ್ಯಸ್ಥರಾಗಿರುವ ಪ್ರತಿಯೊಂದು ಜಿಲ್ಲಾ ಆಸ್ಪತ್ರೆಯಲ್ಲಿ ವೃದ್ಧಾಪ್ಯ ರೋಗಿಗಳಿಗೆ ಮೀಸಲಿರಿಸಿದ ಸೌಲಭ್ಯಗಳು ದೊರೆಯುವಂತೆ

– ನೋಡಿಕೊಳ್ಳತಕ್ಕದ್ದು.

## ಅಧ್ಯಾಯ – V
## ಹಿರಿಯ ನಾಗರಿಕರ ಜೀವ ಮತ್ತು ಆಸ್ತಿಗಳ ರಕ್ಷಣೆ

**21. ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಪ್ರಚಾರ, ಜಾಗೃತಿ, ಮುಂತಾದವುಗಳಿಗೆ ಕ್ರಮಗಳು.–** ರಾಜ್ಯ ಸರ್ಕಾರವು,–

(i) ಈ ಅಧಿನಿಯಮದ ಉಪಬಂಧಗಳ ಬಗ್ಗೆ ನಿಯತ ಮಧ್ಯಂತರಗಳಲ್ಲಿ ದೂರದರ್ಶನ, ಆಕಾಶವಾಣಿ ಮತ್ತು ಮುದ್ರಣ ಮಾಧ್ಯಮಗಳೂ ಸೇರಿದಂತೆ ಎಲ್ಲ ಸಾರ್ವಜನಿಕ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನೀಡುವಂತೆ;

(ii) ಪೊಲೀಸ್ ಅಧಿಕಾರಿಗಳು ಮತ್ತು ನ್ಯಾಯಾಂಗ ಸೇವಾ ಸದಸ್ಯರೂ ಸೇರಿದಂತೆ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳನ್ನು ಈ ಅಧಿನಿಯಮಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಂವೇದನಾಶೀಲರನ್ನಾಗಿಸುವ, ಅವರಲ್ಲಿ ಜಾಗೃತಿ ಮೂಡಿಸುವ ತರಬೇತಿಯನ್ನು ನಿಯತಕಾಲಿಕವಾಗಿ ನೀಡುವಂತೆ;

(iii) ಹಿರಿಯ ನಾಗರಿಕರ ಕಲ್ಯಾಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಕಾನೂನು, ಗೃಹ ವ್ಯವಹಾರಗಳು, ಆರೋಗ್ಯ ಮತ್ತು ಕಲ್ಯಾಣ ವ್ಯವಹಾರಗಳನ್ನು ನೋಡಿಕೊಳ್ಳುವ ಸಂಬಂಧಪಟ್ಟ ಮಂತ್ರಾಲಯಗಳು ಅಥವಾ ಇಲಾಖೆಗಳು ಒದಗಿಸುವ ಸೇವೆ ನಡುವೆ ಅತ್ಯುತ್ತಮ ಸಮನ್ವಯವಿರುವಂತೆ ಮತ್ತು ಅವುಗಳನ್ನು ನಿಯತಕಾಲಿಕವಾಗಿ ಪುನರ್‌ಪರಿಶೀಲನೆ ನಡೆಸುವಂತೆ

– ನೋಡಿಕೊಳ್ಳಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**22. ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿರ್ದಿಷ್ಟಪಡಿಸಬಹುದಾದ ಪ್ರಾಧಿಕಾರಿಗಳು.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಯುಕ್ತವಾಗಿ ಕಾರ್ಯಗತಗೊಳಿಸುವಂತೆ ನೋಡಿಕೊಳ್ಳಲು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅವಶ್ಯಕವಾಗಬಹುದಾದಂಥ ಅಧಿಕಾರಗಳನ್ನು ಪ್ರದಾನ ಮಾಡಬಹುದು ಮತ್ತು ಅಂಥ ಕರ್ತವ್ಯಗಳನ್ನು ವಿಧಿಸಬಹುದು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟನು, ಹಾಗೆ ತನಗೆ ಪ್ರದತ್ತವಾದ ಎಲ್ಲಾ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸುವಂಥ ಮತ್ತು ತನಗೆ ವಿಧಿಸಿದ ಎಲ್ಲಾ ಅಥವಾ ಯಾವುವೇ ಕರ್ತವ್ಯಗಳನ್ನು ನಿರ್ವಹಿಸುವಂಥ ತನ್ನ ಅಧೀನ ಅಧಿಕಾರಿಯನ್ನು ಮತ್ತು ನಿಯಮಿಸಬಹುದಾದಂಥ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ಆ ಅಧಿಕಾರಿಯು ಯಾವ ಸ್ಥಳೀಯ ಪರಿಮಿತಿಗಳೊಳಗೆ ಚಲಾಯಿಸಬೇಕೋ ಅಥವಾ ನಿರ್ವಹಿಸಬೇಕೋ ಆ ಸ್ಥಳೀಯ ಪರಿಮಿತಿಗಳನ್ನು ನಿರ್ದಿಷ್ಟಪಡಿಸಬಹುದು.

(2) ರಾಜ್ಯ ಸರ್ಕಾರವು ಹಿರಿಯ ನಾಗರಿಕರ ಜೀವಕ್ಕೆ ಮತ್ತು ಸ್ವತ್ತಿಗೆ ರಕ್ಷಣೆ ಒದಗಿಸುವುದಕ್ಕಾಗಿ ಒಂದು ಸಮಗ್ರ ಕ್ರಿಯಾ ಯೋಜನೆಯನ್ನು ನಿರ್ದಿಷ್ಟಪಡಿಸತಕ್ಕದ್ದು.

**23. ಕೆಲವು ಸಂದರ್ಭಗಳಲ್ಲಿ ಆಸ್ತಿ ವರ್ಗಾವಣೆಯು ಶೂನ್ಯವಾಗುವುದು.–** (1) ಈ ಅಧಿನಿಯಮದ ಪ್ರಾರಂಭದ ತರುವಾಯ, ಯಾರೇ ಹಿರಿಯ ನಾಗರಿಕನು ತನ್ನ ಆಸ್ತಿಯನ್ನು ತನ್ನಿಂದ ವರ್ಗಾವಣೆ ಪಡೆದ ವ್ಯಕ್ತಿಯು ವರ್ಗಾವಣೆಕಾರನಾದ ತನಗೆ ಮೂಲಭೂತ ಸೌಕರ್ಯಗಳನ್ನು ಮತ್ತು ಮೂಲಭೂತ ವಾಸ್ತವಿಕ ಅಗತ್ಯತೆಗಳನ್ನು ಒದಗಿಸತಕ್ಕದ್ದೆಂಬ ಷರತ್ತಿಗೊಳಪಟ್ಟು, ದಾನದ ರೂಪದಲ್ಲಿ ಅಥವಾ ಬೇರೆ ರೀತಿಯಲ್ಲಿ ವರ್ಗಾವಣೆ ಮಾಡಿದಲ್ಲಿ ಮತ್ತು ಹಾಗೆ ವರ್ಗಾವಣೆ ಪಡೆದವನು ಅಂಥ ಸೌಕರ್ಯಗಳನ್ನು ಮತ್ತು ವಾಸ್ತವಿಕ ಅಗತ್ಯತೆಗಳನ್ನು ಒದಗಿಸಲು ನಿರಾಕರಿಸಿದಲ್ಲಿ ಅಥವಾ ವಿಫಲನಾದಲ್ಲಿ, ನ್ಯಾಯಾಧಿಕರಣವು ಸದರಿ ಆಸ್ತಿಯ ವರ್ಗಾವಣೆಯನ್ನು ಮೋಸದಿಂದ ಅಥವಾ ಒತ್ತಾಯದಿಂದ ಅಥವಾ ಅನುಚಿತ ಪ್ರಭಾವ ಬೀರುವುದರ ಮೂಲಕ ಮಾಡಲಾದುದೆಂದು ಭಾವಿಸತಕ್ಕದ್ದು ಮತ್ತು ವರ್ಗಾವಣೆಕಾರನ ಇಚ್ಛೆಗನುಗುಣವಾಗಿ ಅದನ್ನು ಶೂನ್ಯವೆಂದು ಘೋಷಿಸತಕ್ಕದ್ದು.

(2) ಯಾರೇ ಹಿರಿಯ ನಾಗರಿಕನು ಸಂಪತ್ತಿನಿಂದ ಪಾಲನೆ–ಪೋಷಣೆ ಸೌಲಭ್ಯ ಪಡೆಯುವುದಕ್ಕೆ ಹಕ್ಕುಳ್ಳವನಾಗಿದ್ದು, ಅಂಥ ಸಂಪತ್ತು ಅಥವಾ ಅದರ ಭಾಗವನ್ನು ವರ್ಗಾವಣೆ ಮಾಡಿದ್ದಲ್ಲಿ ವರ್ಗಾವಣೆ ಪಡೆದವನಿಗೆ ಆ ಹಕ್ಕಿನ ಬಗ್ಗೆ ತಿಳಿವಳಿಕೆ ಇದ್ದರೆ ಅಥವಾ ವರ್ಗಾವಣೆ ಪುಕ್ಕಟೆಯಾಗಿದ್ದರೆ ಪಾಲನೆ–ಪೋಷಣೆ ಸೌಲಭ್ಯ ಪಡೆಯುವ ಹಕ್ಕನ್ನು ವರ್ಗಾವಣೆ ಪಡೆದವನ ವಿರುದ್ಧ ಜಾರಿಗೊಳಿಸಬಹುದು. ಆದರೆ ಪ್ರತಿಫಲ ಧನಕ್ಕಾಗಿ ಮತ್ತು ಹಕ್ಕಿನ ಬಗ್ಗೆ ತಿಳಿವಳಿಕೆ ಇಲ್ಲದೆ ವರ್ಗಾವಣೆ ಪಡೆದವನ ವಿರುದ್ಧ ಆ ಹಕ್ಕನ್ನು ಜಾರಿಗೊಳಿಸುವಂತಿಲ್ಲ.

(3) ಯಾರೇ ಹಿರಿಯ ನಾಗರಿಕನು (1)ನೇ ಮತ್ತು (2)ನೇ ಉಪ–ಪ್ರಕರಣಗಳ ಮೇರೆಗಿನ ಹಕ್ಕುಗಳನ್ನು ಜಾರಿಗೊಳಿಸಲು ಅಸಮರ್ಥನಾಗಿದ್ದರೆ 5ನೇ ಪ್ರಕರಣದ (1)ನೇ ಉಪ–ಪ್ರಕರಣದ ವಿವರಣೆಯಲ್ಲಿ ತಿಳಿಸಿದ ಯಾವುದೇ ಸಂಸ್ಥೆಯು ಆತನ ಪರವಾಗಿ ಕ್ರಮ ಕೈಗೊಳ್ಳಬಹುದು.

## ಅಧ್ಯಾಯ – VI
## ಅಪರಾಧಗಳು ಮತ್ತು ಅಧಿವಿಚಾರಣಾ ಪ್ರಕ್ರಿಯೆ

**24. ಹಿರಿಯ ನಾಗರಿಕನನ್ನು ಮನೆಯಿಂದ ಹೊರಗೆ ಹಾಕುವುದು ಮತ್ತು ಪರಿತ್ಯಜಿಸುವುದು.–** ಹಿರಿಯ ನಾಗರಿಕನ ಪಾಲನೆಯ ಅಥವಾ ರಕ್ಷಣೆಯ ಜವಾಬ್ದಾರಿ ಹೊಂದಿರುವ ಯಾರೇ ಆಗಲಿ, ಅಂಥ ಹಿರಿಯ ನಾಗರಿಕನನ್ನು ಸಂಪೂರ್ಣವಾಗಿ ಪರಿತ್ಯಜಿಸುವ ಉದ್ದೇಶದಿಂದ ಯಾವುದೇ ಸ್ಥಳದಲ್ಲಿ ಅಂಥ ಹಿರಿಯ ನಾಗರಿಕನನ್ನು ಬಿಟ್ಟುಹೋದರೆ ಅವನು ಮೂರು ತಿಂಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**25. ಅಪರಾಧಗಳ ಸಂಜ್ಞಾನ.–** (1) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅಪರಾಧವು ಸಂಜ್ಞೇಯವಾದುದು ಮತ್ತು ಜಾಮೀನಾರ್ಹವಾದುದು ಆಗಿರತಕ್ಕದ್ದು.

(2) ಮ್ಯಾಜಿಸ್ಟ್ರೇಟನು ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕ್ಷಿಪ್ರವಾಗಿ ಅಧಿವಿಚಾರಣೆ ನಡೆಸತಕ್ಕದ್ದು.

## ಅಧ್ಯಾಯ – VII
## ಸಂಕೀರ್ಣ

**26. ಅಧಿಕಾರಿಗಳು ಲೋಕ ನೌಕರರಾಗಿರುವುದು.–** ಈ ಅಧಿನಿಯಮದ ಮೇರೆಗಿನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ನೇಮಕಗೊಂಡ ಪ್ರತಿಯೊಬ್ಬ ಅಧಿಕಾರಿಯನ್ನು ಅಥವಾ ಸಿಬ್ಬಂದಿಯನ್ನು ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರನೆಂದು ಭಾವಿಸತಕ್ಕದ್ದು.

**27. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.–** ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದ ಯಾವುದೇ ಉಪಬಂಧವು ಅನ್ವಯವಾಗುವುದೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ನ್ಯಾಯಾಲಯವು ನಿರ್ಬಂಧಕಾಜ್ಞೆಯನ್ನು ನೀಡತಕ್ಕದ್ದಲ್ಲ.

**28. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಅಥವಾ ಮಾಡಿದ ಯಾವುದೇ ಆದೇಶಗಳ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರಗಳ ಅಥವಾ ಸ್ಥಳೀಯ ಪ್ರಾಧಿಕಾರದ ಅಥವಾ ಸರ್ಕಾರದ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**29. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ತೊಂದರೆಗಳನ್ನು ನಿವಾರಿಸಲು ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**30. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** ಕೇಂದ್ರ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನಗಳನ್ನು ನೀಡಬಹುದು.

**31. ಪುನರವಲೋಕನ ಮಾಡಲು ಕೇಂದ್ರ ಸರ್ಕಾರದ ಅಧಿಕಾರ.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ರಾಜ್ಯ ಸರ್ಕಾರಗಳು ಅನುಷ್ಠಾನಗೊಳಿಸುವಲ್ಲಿ ಆದ ಪ್ರಗತಿಯನ್ನು ನಿಯತವಾಗಿ ಪುನರವಲೋಕನ ಮತ್ತು ಮೇಲ್ವಿಚಾರಣೆ ಮಾಡಬಹುದು.

**32. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು,–

(ಎ) 8ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು 5ನೇ ಪ್ರಕರಣದ ಮೇರೆಗೆ ವಿಚಾರಣೆ ನಡೆಸುವ ರೀತಿಗೆ;

(ಬಿ) 8ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಇತರ ಉದ್ದೇಶಗಳಿಗಾಗಿ ನ್ಯಾಯಾಧಿಕರಣದ ಅಧಿಕಾರ ಮತ್ತು ಪ್ರಕ್ರಿಯೆಗೆ;

(ಸಿ) 9ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನ್ಯಾಯಾಧಿಕರಣವು ಆದೇಶಿಸಬಹುದಾದ ಗರಿಷ್ಠ ಪಾಲನೆ–ಪೋಷಣೆ ಭತ್ಯೆಗೆ;

(ಡಿ) 19ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ವೃದ್ಧಾಶ್ರಮಗಳ ವಾಸಿಗಳಿಗೆ ವೈದ್ಯೋಪಚಾರಕ್ಕಾಗಿ ಮತ್ತು ಮನರಂಜನಾ ಸಾಧನ ಸೌಲಭ್ಯಗಳಿಗಾಗಿ ಅವಶ್ಯಕವಾಗಿರುವ ಗುಣಮಟ್ಟಗಳನ್ನು ಮತ್ತು ವಿವಿಧ ರೀತಿಯ ಸೇವೆಗಳನ್ನು ವೃದ್ಧಾಶ್ರಮಗಳು ಒದಗಿಸುವುದೂ ಸೇರಿದಂತೆ ಅಂಥ ವೃದ್ಧಾಶ್ರಮಗಳ ನಿರ್ವಹಣೆಯ ಕಾರ್ಯಯೋಜನೆಗೆ;

(ಇ) 22ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಪ್ರಾಧಿಕಾರಿಗಳ ಅಧಿಕಾರಗಳಿಗೆ ಮತ್ತು ಕರ್ತವ್ಯಗಳಿಗೆ;

(ಎಫ್) 22ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಹಿರಿಯ ನಾಗರಿಕರ ಜೀವಕ್ಕೆ ಮತ್ತು ಆಸ್ತಿ–ಪಾಸ್ತಿಗೆ ರಕ್ಷಣೆ ಒದಗಿಸುವುದಕ್ಕಾಗಿನ ಸಮಗ್ರ ಕ್ರಿಯಾ ಯೋಜನೆಗೆ;

(ಜಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯಕ್ಕೆ

– ಉಪಬಂಧ ಕಲ್ಪಿಸಬಹುದು.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲವು ಎರಡು ಸದನಗಳನ್ನು ಒಳಗೊಂಡಿರುವಲ್ಲಿ, ಪ್ರತಿಯೊಂದು ಸದನದ ಮುಂದೆ ಅಥವಾ ವಿಧಾನ ಮಂಡಲವು ಒಂದೇ ಸದನವನ್ನು ಒಳಗೊಂಡಿರುವಲ್ಲಿ, ಆ ಸದನದ ಮುಂದೆ ಮಂಡಿಸತಕ್ಕದ್ದು.

* * *

Govt. Press, Bangalore, P7, W.D:283 , Copies: 150